## ‘ಪರವಾಗಿಲ್ಲ ಕೊಡಿ’

ಖೋಟಾ ನೋಟು ತಯಾರಿಸುತ್ತಿದ್ದ ಗುಂಡ ಒಮ್ಮೆ ಮರೆತು 25 ರೂಪಾಯಿಯ ನೋಟು ತಯಾರಿಸಿಬಿಟ್ಟ. ಏನಾದರೂ ಮಾಡಿ ಅದನ್ನು ಚಲಾವಣೆ ಮಾಡಬೇಕೆಂದು ಐದಾರು ಬಾರಿ ಪ್ರಯತ್ನಿಸಿ ವಿಫಲನಾಗಿದ್ದ. ಕೊನೆಗೆ ಒಬ್ಬ ಸೇಠ್‌ಜೀ ಬಳಿಗೆ ಹೋಗಿ ‘25 ರೂಪಾಯಿಗೆ ಚಿಲ್ಲರೆ ಕೊಡಿ’ ಎಂದಾಗ ಅವನು, ‘ಚಿಲ್ಲರೆ ಕೊಡುತ್ತೇನೆ. ಆದರೆ, ಒಂದು ರೂಪಾಯಿ ಕಡಿಮೆ ಅಂದರೆ 24 ರೂಪಾಯಿ ಕೊಡುತ್ತೇನೆ’ ಎಂದ. ಗುಂಡ ಮನದಲ್ಲೇ ಸೇಠ್‌ಜೀಗೆ ಟೋಪಿ ಹಾಕುತ್ತಿರುವುದಕ್ಕೆ ಖುಷಿ ಪಡುತ್ತ, ‘ಪರವಾಗಿಲ್ಲ ಅಷ್ಟೇ ಕೊಡಿ’ ಎಂದ.




ಆಗ ಸೇಠ್‌ಜೀ ಒಳಗೆ ಹೋಗಿ 12 ರೂಪಾಯಿಯ ಎರಡು ನೋಟುಗಳನ್ನು ತಂದುಕೊಟ್ಟಾಗ ಗುಂಡ ಬಾಲ ಸುಟ್ಟ ಬೆಕ್ಕಿನಂತಾಗಿದ್ದ.

**ಎಂ.ಕೆ. ಮಂಜುನಾಥ್, ಬೆಂಗಳೂರು**

## ಕಳ್ಳರಿರಬಹುದು!

ರಾತ್ರಿ ಎರಡೂವರೆ ಗಂಟೆ. ಇಡೀ ನಗರವೆಲ್ಲಾ ಗಾಢ ನಿದ್ದೆಯಲ್ಲಿ ಮುಳುಗಿರುವ ಸಮಯ. ಇದೇ ಕಳ್ಳತನಕ್ಕೆ ತಕ್ಕ ಸಮಯವೆಂದು, ಇಬ್ಬರು ಕಳ್ಳರು ಮನೆಯೊಂದಕ್ಕೆ ಕನ್ನ ಹಾಕಲು ಬಂದರು. ಕಳ್ಳರ ಹೆಜ್ಜೆ ಸಪ್ಪಳ ಕೇಳಿಸಿಕೊಂಡು ‘ರೀ!, ಸಾಕು, ಮೇಲೆ ಎದ್ದೇಳಿ, ಕಳ್ಳರು ಬಂದಂತಿದೆ!’ ಎಂದು ಪಿಸುಗುಟ್ಟಿದ್ದು ಕಿಟಕಿಯೊಳಗಿಂದ ಕಳ್ಳರಿಗೆ ಕೇಳಿಸಿತು. ಲಗುಬಗೆಯಿಂದ ಓಡುವಾಗ, ಒಬ್ಬ ಕಳ್ಳ ತನ್ನ ಜೊತೆಗಾರನಿಗೆ ‘ಹೊಸದಾಗಿ ಮದುವೆಯಾದವರು ಅಂತ ಕಾಣುತ್ತೆ! ನಾವು ಈ ಮನೆಗೆ ಬರಬಾರದಿತ್ತು!’ ಅಂದ.

**– ಕೆ.ಜಿ. ಭದ್ರಣ್ಣವರ, ಮುದ್ದೇಬಿಹಾಳ**



ಚಿತ್ರಗಳು : ಗಣೇಶ ಆಚಾರ್ಯ